ಜೀವನದಲ್ಲಿ ಮೊದಲ ಬಾರಿಗೆ ಹೇಳಿಸಿಕೊಂಡ 'ಬೋಳೀಮಗನೇ' ವಿಶೇಷಣಕ್ಕೆ ಅವನ ಮಿದುಳಿಗೆ ಥಟ್ಟನೆ ಪ್ರತಿಕ್ರಿಯಿಸಲೇ ಆಗಲಿಲ್ಲ. ತಾನು ಒಡ್ಡುವ ಅಸಾಧ್ಯ ಟಾಸ್ಕ್‌ಗಳಿಗೆ ಎದುರಾಡುವ ನಚಿಕೇತ್‌ನನ್ನು ತಾನು ಬಾಸ್ಟರ್ಡ್ ಎಂದು ಮನಸ್ಸಿನಲ್ಲೇ ಬೈದು ಕೊಂಡಿದ್ದರೂ ಆ ತಣ್ಣಗಿನ ಎಸಿಯಲ್ಲಿ, ಮೀಟಿಂಗ್ ರೂಮಿನ ವೃತ್ತಿಪರ ವಾತಾವರಣದಲ್ಲಿ ಅದೆಷ್ಟು 'ಕೂಲ್' ಆದ ಪ್ರೊಫೆಷನಲ್ ಬೈಗುಳದಂತೆ ಧ್ವನಿಸಿತ್ತು! ಈ ಕ್ಷಣವೇ ಋತುರಾಜನ ವಿರುದ್ಧ ಎಸ್ಕಲೇಟ್ ಮಾಡಿ, ಮೇಲಿನವರಿಗೆ ಮೇಯ್ಲ್ ಮಾಡಬೇಕು ಅನ್ನಿಸಿ, ಮರುಕ್ಷಣವೇ ಇದು ಆಫೀಸಲ್ಲ ಎನ್ನುವುದು ಅರಿವಾಯಿತು.

'ಯಾಕೋ ಋತು ಹೀಗೆ ಮಾತಾಡ್ತೀಯಾ? ನಾನೇನು ನಿಮ್ಮನೆ ಜಾಗಾನಾ ಕೇಳಿದ್ನಾ? ನಾವು ತೋಟಕ್ಕೆ ಹೋಗೋ ದಾರಿಯಲ್ವೇನೋ ಅದು? ಅದ್ಕೆ ಬೇಲಿ ಹಾಕಿ ಅಲ್ಲೆಂತ ತೋಟ ಬೆಳೆಸ್ತೀಯೇನೋ?'

ಬೋಳಿಮಗನೇ ಅನ್ನಿಸಿಕೊಂಡ ಮೇಲೂ ಇಷ್ಟು ವಿಧೇಯವಾಗಿ ಕೇಳುತ್ತಿರುವುದು ಜೀತುವಿಗೆ ಸಂಕಟವಾಗಿತ್ತು. ಎಷ್ಟೆಲ್ಲ ವರ್ಷಗಳ ಅನುಭವದಿಂದಾಗಿ ಬೈಸಿಕೊಳ್ಳುವ ಜಾಗದಿಂದ ಬೈಯುವ ಸ್ಥಾನಕ್ಕೆ ಬಂದಿದ್ದ ತಾನೀಗ ಇದ್ದಕ್ಕಿದ್ದಂತೆ ಹಿಂದೆ ಹೋಗಿ ಜೂನಿಯರ್ ಆಗಿಹೋದೆನೇನೋ ಅನ್ನಿಸಿ ಅವನಿಗೆ ಗಾಬರಿಯಾಯಿತು.

'ತೋಟಾನಾದ್ರೂ ಬೆಳೆಸ್ತೆ, ಗೂಟಾನಾದ್ರೂ ನೆಡ್ತೆ. ಕೇಳೂಕ್ ನೀ ಯಾವೂರ್ ನಾಯೀನಾ? ನಿನ್ನಪ್ಪಯ್ಯಂಗೆ ಎರ್ಡ್ ಬೆಚ್ಕಂದೇಳಿ ಮಾಡಿದ್ದೆ. ಅಕ್ಸರ ಕಲ್ಸಿದ್ ಮೇಷ್ಟ್ರಂದೇಳಿ ಸುಮ್ನಾಯ್ದೆ. ಇನ್ನೊಂದ್ ಮಾತಾಡ್ರೆ ನಿಂಗೇ ಬೆಚ್ತೆ. ನಿವಾಳ್ಸಾ ಮಗ್ನೇ'

ಋತುರಾಜ ಅಬ್ಬರಿಸಿದ. ಪ್ರತೀ ಉತ್ತರದಲ್ಲೂ ಹೆಚ್ಚುತ್ತಿರುವ ಎದುರಾಳಿಯ ನಿಶ್ಶಕ್ತಿ ಅವನ ಅರಿವಿಗೆ ಬರತೊಡಗಿತ್ತು. ಅದಕ್ಕೆ ತಕ್ಕನಾಗಿ ಇವನು ಮಾತಿಂದ ಮಾತಿಗೆ ತನ್ನ ಕೋಪವನ್ನು ಜಾಸ್ತಿ ಮಾಡಿಕೊಳ್ಳುತ್ತಿದ್ದ.

'ವಾಟ್ ದ ಹೆಲ್ ಮ್ಯಾನ್? ಹೌ ಕೆನ್ ಯು ರಿಸ್ಟ್ರಿಕ್ಟ್ ಎ ಗವರ್ಮೆಂಟ್ ರೋಡ್? ಮರ್ಯಾದೆಯಿಂದ ನಮ್ ರೋಡಿಗೆ ಹಾಕಿರೋ ದಣಪೆನಾ ತೆಗೆದ್ರೆ ಆಯ್ತು. ಇಲ್ಲಾಂದ್ರೆ ನಾನೇ ಕಿತ್ತಾಕ್ಬೇಕಾಗುತ್ತೆ'

ಎದುರಾಳಿಯ ಒಂದೊಂದು ಕಡುಮಾತಿಗೂ ತನ್ನೊಳಗಿನ ಪ್ರೊಫೆಷನಲ್ ಪಾಲಿಷ್ ಅನ್ನು ಅಷ್ಟಷ್ಟೇ ಕಳೆದುಕೊಳ್ಳುತ್ತಾ ಬಂದ ಜೀತು ಕೊನೆಗೂ ಅಬ್ಬರಿಸಿದ. ಅತ್ತ ಇಂಥಾದ್ದೊಂದು ಪ್ರತ್ಯುತ್ತರಕ್ಕಾಗಿಯೇ ಕಾಯುತ್ತಿದ್ದ ಋತುರಾಜ, 'ಏನಂದ್ಯಾ ಬೇವರ್ಸೀ, ತಾಕತ್ತಿದ್ರೆ ಮುಟ್ಟ ನೋಡಣ' ಎನ್ನುತ್ತಾ ಜೀತುವಿನ ಮೇಲೆ ಲಂಘಿಸಿದ. ಎಸ್ಕಲೇಷನ್ ಈಮೇಯ್ಲೊಂದು ಮನುಷ್ಯನಾಗಿ ಇನ್‌ಬಾಕ್ಸಿನಿಂದ ಹೊರಬಂದಂತೆ ಬೆಚ್ಚಿದ ಜೀತು ಸಾವರಿಸಿಕೊಂಡು ತಿರುಗಿ ಹೊಡೆಯಲು ನೋಡಿದನಾದರೂ ಬಡಿದಾಡಲೆಂದೇ ಹುಟ್ಟಿದಂತಿರುವ ಋತುರಾಜನೆದುರು ಅವನ ಆಟ ಹೆಚ್ಚು ಹೊತ್ತು ಸಾಗಲಿಲ್ಲ. ಆಚೀಚೆ ಮನೆಯವರೆಲ್ಲ ಬಂದು ಬಿಡಿಸುವ ಹೊತ್ತಿಗೆ ಜೀತುವಿನ ಟೀಶರ್ಟು ಹರಿದು ಋತುರಾಜನ ಕೈಗೆ ಹೋಗಿ, ಅಲ್ಲಿಂದ ದೂಳಿಗೆಸೆಯಲ್ಪಟ್ಟಿತ್ತು.



* * *

ಕೃತಕ ಹವಾ ನಿಯಂತ್ರಣ ಹಾಗೂ ಪ್ರೊಫೆಷನಲ್ ನಿಯಮಗಳ ಮೂಲಕ ಎಲ್ಲವನ್ನೂ ತಣ್ಣಗಿಡುವ ಆಫೀಸು ಹಾಗೂ ಅದರ ಈಮೇಯ್ಲ್ ಲೋಕದಿಂದಾಚೆಗಿನ ಪ್ರಪಂಚ ಎಷ್ಟೊಂದು ಭಯಾನಕವಾಗಿದೆಯೆನ್ನುವುದನ್ನು ಮೊದಲ ಬಾರಿಗೆ ಅರ್ಥ ಮಾಡಿಕೊಂಡ ಜೀತು ಹತಾಶನಾದ. ತನ್ನ ದೊಡ್ಡ ಸಂಬಳ, ಹುದ್ದೆ, ಘನತೆಗಳೆಲ್ಲ ಏನೇನೂ ಅಲ್ಲದ ಲೋಕವೊಂದು ತನ್ನ ಮನೆಯ ಪಕ್ಕದಲ್ಲೇ ಇದೆಯೆನ್ನುವ ಸತ್ಯವೇ ಅವನನ್ನು ಅಧೀರನನ್ನಾಗಿಸಿತು. ಮುಂದಿನ ಹಲವು ತಿಂಗಳ ಕಾಲ ಅವನು ಮಾಡಿದ ಪ್ರಯತ್ನಗಳಿಗೆ ಋತುರಾಜನ ಬೇಲಿಯ ಒಂದು ಬಡಿಕೆಯನ್ನು ಸಡಿಲಿಸಲೂ ಆಗಲಿಲ್ಲ.

ಋತುರಾಜನ ಪಾಲಿಗೆ ಈ ಒಂದು ಕದನ ಮೇಷ್ಟ್ರಿಗೆ ಹಾಗೂ ಅವರ ತೋಟಕ್ಕೆ ಕೊಡಬಹುದಾದ ಕಾಟಗಳ ಅಸಂಖ್ಯಾತ